# ವುಡ್ ಪಾಲಿಶ್ ಮಾಡುವ ಮತ್ತು ಬಣ್ಣ ಬಳಿಯುವ ಕಾರ್ಮಿಕರಿಗೆ ದವಸ-ಧಾನ್ಯ ವಿತರಣೆ

**ಚಿತ್ರದುರ್ಗ - ಏ. 28** - ನಗರದ ಶ್ರೀ ಮುರುಘರಾಜೇಂದ್ರ ಮಠದಲ್ಲಿಂದು ಬಣ್ಣ ಬಳಿಯುವ, ವುಡ್ ಪಾಲಿಷ್ ಮಾಡುವ ಕಾರ್ಮಿಕರಿಗೆ, ಮಂಜುನಾಥ ವಿಕಲಚೇತನ ಸೇವಾ ಸಂಘ, ಕೆಳಗೋಟೆ, ಈಡಿಗ ಸಮಾಜ ಹಾಗು ಆಟೋ ಚಾಲಕರ ಸಂಘ ಮೊದಲಾದ ಸಂಘ ಸಂಸ್ಥೆಗಳಿಗೆ ಡಾ. ಶಿವಮೂರ್ತಿ ಮುರುಘಾ ಶರಣರು ದವಸ-ಧಾನ್ಯ ವಿತರಿಸಿದರು.

ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಈಡಿಗ ಸಮಾಜದ ಮುಖಂಡ ಹೆಚ್.ಜೀವನ್, ಶ್ರೀಮತಿ ಆರತಿ ಶಿವಮೂರ್ತಿ, ಮಹಡಿ ಶಿವಮೂರ್ತಿ, ವಿಕಲಚೇತನ ಸೇವಾ ಸಂಘದ ವಿ.ಮಾರುತಿ, ವಕೀಲರಾದ ಉಮೇಶ್, ಬಸವರಾಜ ಗಡ್ಡೆಪ್ಪನವರ, ನಮ್ಮ ಆಟೋ ಬಳಗದ ತಿಪ್ಪೇಸ್ವಾಮಿ, ಕಲಾವಿದ ರಂಗಣ್ಣ ಮೊದಲಾದವರಿದ್ದರು.



